ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1072**

ಸದಸ್ಯರ ಹೆಸರು : ಶ್ರೀ ಕೆ.ವಿ.ನಾರಾಯಣಸ್ವಾಮಿ

(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 22.12.2021.

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.25ರ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಮನೆಗಳು ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.25ರ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಮನೆಗಳು ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಸದರಿ ಜಮೀನಿನಲ್ಲಿ ಎಷ್ಟು ಮನೆಗಳನ್ನು ಸಕ್ರಮಗೊಳಿಸಲಾಗಿದೆ; ಉಳಿದ ಮನೆಗಳನ್ನು ಸಕ್ರಮಗೊಳಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;	ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.25ರ ಜಮೀನು ಮೂಲತಃ ಸರ್ಕಾರಿ ಗೋಮಾಳ ಜಮೀನಾಗಿದ್ದು, ಸದರಿ ಸರ್ವೇ ನಂ.ಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಸಿಸಿ ಅಡಿಯಲ್ಲಿ 126 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಪೈಕಿ ಈಗಾಗಲೇ ಹರಾಜಾಗಿರುವ ಜಮೀನಿನ ವ್ಯಾಪ್ತಿಯಲ್ಲಿ ಬರುವ ವಿಸ್ತೀರ್ಣಕ್ಕೆ ಸಂಬಂಧಿಸಿದ 92 ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ. ಉಳಿದ 34 ಅರ್ಜಿಗಳು ಬಿಡಿಎ ಯಿಂದ ಭೂಸ್ವಾಧೀನವಾಗಿರುವ ವಿಸ್ತೀರ್ಣದಲ್ಲಿ ಒಳಪಡುವುದರಿಂದ ಸದರಿ 34 ಅರ್ಜಿಗಳು ಪರಿಶೀಲನೆಯಲ್ಲಿದೆ.
ಇ)	ಅಕ್ರಮ ಮನೆಗಳ ನಿರ್ಮಾಣದಿಂದ ಸದರಿ ಜಾಗವನ್ನು ಹರಾಜಿನಲ್ಲಿ ಕೊಂಡ ವ್ಯಕ್ತಿಯು ಬೇರೊಂದು ಜಾಗವನ್ನು ನೀಡುವಂತೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು/ತಹಶೀಲ್ದಾರರಿಗೆ	ಬೆಂಗಳೂರು ಉತ್ತರ ತಾಲ್ಲೂಕು ಸೋಮಶೆಟ್ಟಿಹಳ್ಳಿ ಗ್ರಾಮದ ಸ.ನಂ.25ರಲ್ಲಿನ 25.00 ಎಕರೆ ಜಮೀನನ್ನು ಶ್ರೀ ಸಚಿನ್ ನಾರಾಯಣ ಮತ್ತು ಪೃಥ್ವಿ ನಾರಾಯಣ ಇವರಿಗೆ ಹರಾಜಾಗಿದ್ದು, ಈ ವಿಸ್ತೀರ್ಣಕ್ಕೆ ಕಂದಾಯ ದಾಖಲೆಗಳಲ್ಲಿ ಪಹಣಿ ದಾಖಲಿಸಲಾಗಿರುತ್ತದೆ.

	ಮನವಿಯನ್ನು ಸಲ್ಲಿಸಿದ್ದಾರೆಯೇ;ಸಲ್ಲಿಸಲಾಗಿದ್ದಲ್ಲಿ, ಅದರ ಪ್ರತಿಯನ್ನು ನೀಡುವುದು;	ಸದರಿ ಅರ್ಜಿದಾರರು ದಿನಾಂಕ:07.01.2019ರಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಮನವಿ ಸಲ್ಲಿಸಿ ಹರಾಜಿನಲ್ಲಿ ಪಡೆದ ಜಮೀನಿಗೆ ಬದಲಿಯಾಗಿ ಅಷ್ಟೇ ವಿಸ್ತೀರ್ಣದ ಬದಲಿ ಜಮೀನು ನೀಡುವಂತೆ ಕೋರಿದ್ದು, ಈ ಬಗ್ಗೆ ಸಂಬಂಧಿಸಿದ ತಹಶೀಲ್ದಾರ್‌ರವರಿಗೆ ಹರಾಜಾಗಿರುವ ಜಮೀನಿನಲ್ಲಿ ಇರುವ ಅನಧಿಕೃತ ಮನೆಗಳನ್ನು ತೆರವುಗೊಳಿಸಿ ಹರಾಜುದಾರರಿಗೆ ಹಸ್ತಾಂತರಿಸಲು , ಮನೆಗಳನ್ನು ತೆರವುಗೊಳಿಸಲು ಸಾಧ್ಯವಿಲ್ಲದ ಪಕ್ಷದಲ್ಲಿ ಸೂಕ್ತ ಸಕಾರಣಗಳೊಂದಿಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.
ಈ)	ಸದರಿ ಜಮೀನಿನಲ್ಲಿ ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಯೊಬ್ಬರು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಮನೆಗಳನ್ನು ನಿರ್ಮಾಣ ಮಾಡಿಸುತ್ತಿರುವ ಬಗ್ಗೆ ಗ್ರಾಮಸ್ಥರು ತಾಲ್ಲೂಕು ಪಂಚಾಯಿತಿ ಮತ್ತು ವಿವಿಧ ಕಾರ್ಯಾಲಯಕ್ಕೆ ದಾಖಲೆ ಸಮೇತ ದೂರು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಂತಹ ಪ್ರಕರಣ ಕಂಡುಬಂದಿರುವುದಿಲ್ಲ.
ಉ)	ಬಂದಿದ್ದಲ್ಲಿ, ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಲು ಯತ್ನಿಸುತ್ತಿರುವ ವ್ಯಕ್ತಿಯ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; ಕ್ರಮ ಕೈಗೊಳ್ಳದಿದ್ದರೆ, ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: ಆರ್‌ಡಿ 256 ಎಲ್‌ಜಿಕ್ಯೂ 2021 (ಇ)

(ಆರ್.ಅಶೋಕ)

ಕಂದಾಯ ಸಚಿವರು